ಎನ್ನುವುದು ನಂತರ ಗೊತ್ತಾದ ಸತ್ಯ. ಮುಂದೆ ಅಲಿಮಿನಿ ಎಂದು ಹಳ್ಳಿಯವರ ಬಾಯಲ್ಲಿ ಕರೆಸಿಕೊಳ್ಳುತ್ತಿದ್ದ ಅಲ್ಯುಮಿನಿಯಂ ಪಾತ್ರೆಗಳು ಬಂದುವು. ನಂತರ ಫಳಗುಟ್ಟುವ ಸ್ಟೀಲ್ ಪಾತ್ರೆಗಳ ಯುಗ. ವರ್ಷಕ್ಕೆರಡು ಬಾರಿ ಎಂಬಂತೆ ಹಾಜರಿ ಹಾಕಿ, ಮನೆಯ ಅಂಗಳದ ಮೂಲೆಯಲ್ಲಿ ಕೂತು, ಗುಂಡಿ ತೋಡಿದ ಒಲೆಯಲ್ಲಿ ಬೆಂಕಿ ಉರಿಸಿ, ತವರ ಕರಗಿಸಿ, ಹಿತ್ತಾಳೆ, ತಾಮ್ರದ ಪಾತ್ರೆಗಳಿಗೆ ಕಲಾಯಿ ಹಾಕಿಕೊಡುತ್ತಿದ್ದ ಕಲಾಯಿ ಸಾಬರು ಮನೆಬಾಗಿಲಿಗೆ ಬರುವುದು ಕಮ್ಮಿಯಾಗುತ್ತಾ ಕ್ರಮೇಣ ನಿಂತೇ ಹೋಯ್ತು. ಮನೆಯ ಹೆಚ್ಚುಕಟ್ಲೆಗಳಲ್ಲಿ ಬಳಸುತ್ತಿದ್ದ ಆಳೆತ್ತರದ ಹಿತ್ತಾಳೆ, ತಾಮ್ರದ ಪಾತ್ರೆಗಳು ಅಟ್ಟ ಸೇರಿದವು. ಅಥವಾ ಮಾರಾಟವಾದವು. ಮನೆಬಾಗಿಲಲ್ಲಿ ಚಪ್ಪರ ಎಬ್ಬಿಸಿ ಮಾಡುತ್ತಿದ್ದ ಮದುವೆ ಮುಂಜಿಗಳು ಬಾಡಿಗೆ ಛತ್ರಕ್ಕೆ ಜಾಗ ಬದಲಿಸಿದ ಮೇಲೆ ಮನೆಯಲ್ಲಿ ದೊಡ್ಡ ದೊಡ್ಡ ಪಾತ್ರೆ ಪರಡಿಗಳು ಯಾಕೆ ಬೇಕು? ಎಲ್ಲಿ ಸಮಾರಂಭ ಏರ್ಪಾಟಾಗಿರುತ್ತದೆಯೋ ಅಲ್ಲಿ ಬಾಡಿಗೆಗೆ ಸಿಗತೊಡಗಿದ್ದುವು ಪಾತ್ರೆಗಳು. ಮನೆಯಲ್ಲಿ ಹಸರಣೆ ಯಾರು ಇಟ್ಟುಕೊಳ್ಳುತ್ತಾರೆ? ಅವಶ್ಯಕತೆಗೆ ಎಷ್ಟು ಬೇಕೋ ಅಷ್ಟೇ ಉಳಿದುಕೊಂಡು ಮಿಕ್ಕವು ಪರಭಾರೆಯಾದುವು. ವಿಶೇಷ ಕಟ್ಲೆಗಳಲ್ಲಿ ಮನೆ ಯಜಮಾಂತಿ ಅಡುಗೆಯವರಿಗೆ ತಪ್ಪದೆ ಹೇಳುತ್ತಿದ್ದ ಮಾತು ಇತಿಹಾಸದ ಪುಟ ಸೇರಿತು.

'ಕಲಾಯಿ ಸರಿ ಉಂಟಾ ನೋಡಿ ಭಟ್ರೇ. ಗ್ರಾಚಾರ ಕೆಟ್ರೆ ಕಷ್ಟ...'

***

ಐದು ತಿಂಗಳು ತುಂಬಲಿರುವ ಮಗನನ್ನು ಎತ್ತಿಕೊಂಡು ಸೀತಾಲಕ್ಷ್ಮಿ ಗಂಡನ ಮನೆಗೆ ಬಂದಳು. ಜೊತೆಯಲ್ಲಿ ಕಳಿಸಿಕೊಡಲು ಅವಳ ಅಮ್ಮ, ಅಣ್ಣ. ಗಂಡನ ಮನೆಯ ಹೊಸಿಲು ದಾಟುವ ಮುನ್ನ ವಾರಗಿತ್ತಿ ಕನಕ ಕದಲಾರತಿ ಬೆಳಗಿ ತನ್ನನ್ನು, ತನ್ನ ಮಗನನ್ನು ಒಳಗೆ ಬರಮಾಡಿಕೊಳ್ಳುತ್ತಾಳೆ. ವಾಸ್ತುಬಾಗಿಲಲ್ಲಿ ನಿಂತ ಅತ್ತೆ ಕಣ್ಣ ತುಂಬಾ ಕಾತರ ತುಂಬಿಕೊಂಡು ಮೊಮ್ಮಗನ ನಿರೀಕ್ಷೆ ಮಾಡುತ್ತಿರುತ್ತಾರೆ, ಒಳಗೆ ನೆಂಟರಿಗೆಂದು ಪಕ್ವಾನ್ನ ತಯಾರಾಗಿರುತ್ತದೆ ಎಂದು ಅವಳ ಊಹೆ. ಅವಳ ಮಗನನ್ನು ಮನೆಯವರ್ಯಾರೂ ಇನ್ನೂ ನೋಡಿರಲಿಲ್ಲ. ಹನ್ನೆರಡನೇ ದಿನ ನಾಮಕರಣ ನಡೆದಾಗ ಬಂದಿದ್ದು ಶಿವರಾಮ ಒಬ್ಬನೇ.

'ಯಾಕೆ ಯಾರೂ ಬರ್ಲಿಲ್ಲ? ಹೇಳಿಕೆ ಮಾಡಿದ್ದು ಸರಿಯಾಗ್ಲಿಲ್ವಂತಾ? ಕೊನೇಪಕ್ಷ ವೆಂಕಟರಾಮು ಆದ್ರೂ ಬರ್ಬೋದಿತ್ತಪ್ಪಾ...'

ಅಸಹನೆಯಿಂದ ಕೇಳಿದ್ದಳು ಬಾಣಂತಿ.

'ಕನಕ ಮುಟ್ಟು ಕಣೇ, ಬರೋ ಹಂಗಿರ್ಲಿಲ್ಲ.'

'ಅತ್ತೆ?'

'ಅವಳು ಗೊತ್ತಿಲ್ವಾ ನಿಂಗೆ? ಮನೆ ಬಿಟ್ಟು ಎಲ್ಲಿಗಾದ್ರೂ ಹೋಗೋ ಪಂಚಾತ್ಕೆ ಇಲ್ಲ...'

'ಹೋಗ್ಲಿ, ವೆಂಕಟರಾಮು ಆದ್ರೂ ಬರ್ಬೋದಿತ್ತಪ್ಪಾ. ಅವರಿಗೇನು ಧಾಡಿ?'

'ಮನೇಲಿ ಅನ್ನ ಬೇಯ್ಸೋರೊಬ್ರು ಬೇಡ್ವೇನೆ? ಹೆಂಗಹೆಂಗಸ್ರ ಮೇಲೆ ಮನೆ ಜವಾಬ್ದಾರಿ ಬಿಟ್ಟು ಬರೋಕಾಗುತ್ತಾ?'

'ಒಂದಿನ ಹೆಂಗೋ ನಡೀತಿತ್ತು. ಒಂದು ಗಂಜಿ ಬೇಯಿಸೋಕೆ ಅತ್ತೆಗೆ ಕೈಲಾಗಲ್ವಾ?'

'ಬಂದಿರೋರನ್ನ ಬಿಟ್ಟು ಬರದಿರೋರನ್ನೇ ವಿಚಾರಿಸ್ತಿದ್ಯಲ್ಲೇ? ಮುಖ್ಯ ಯಾರು ಬರ್ಬೇಕು? ನಾನು. ಬಂದಿದೀನಲ್ಲಾ...'

ಎರಡು ತಿಂಗಳಲ್ಲಿ ಶಿವರಾಮ ಯಾಕೋ ಇಳಿದು ಹೋಗಿದ್ದಾನೆ ಅನಿಸಿತ್ತು ಬಾಣಂತಿಗೆ. ಕನಕನಿಗೆ ಅಡುಗೆ ಮಾಡಲು ಬರುವುದಿಲ್ಲ. ಎಲ್ಲಾ ಅಚ್ಚುಕಟ್ಟಾಗಿರದಿದ್ದರೆ ಶಿವರಾಮನಿಗೆ ಊಟ ಸೇರುವುದಿಲ್ಲ. ಹೆಂಡತಿಯಾದರೆ ಬೇಕಾದ್ದು ಮಾಡಿ ಬಡಿಸಿ ನಿಗಾ ನೋಡಿಕೊಳ್ಳುತ್ತಾಳೆ. ಅತ್ತೆ ಸರಿ ಇದ್ದಿದ್ದರೆ ಮಗನ ಬಗ್ಗೆ ಅವರು ಕಾಳಜಿ ವಹಿಸುತ್ತಿದ್ದರು. ಯಾಕೋ ಕನಿಕರ ಅನಿಸಿತು ಸೀತಾಲಕ್ಷ್ಮಿಗೆ.

'ಸೋತಿದೀರಿ ನೀವು. ಇನ್ನೂ ಅದೇ ಯೋಚ್ನೆ ಮಾಡ್ತಿದೀರಾ? ಸರಿಯಾಗಿ ಊಟ, ತಿಂಡಿ ಮಾಡಲ್ವಾ?' ಕಕ್ಕುಲಾತಿಯಿಂದ ವಿಚಾರಿಸಿಕೊಂಡಳು ಸೀತಾಲಕ್ಷ್ಮಿ. ಗಂಡನ ಮನೆಗೆ ವಂಶೋದ್ಧಾರಕನನ್ನು ಹೆತ್ತು ಕೊಟ್ಟ ಬಿಂಕ ಅವಳ ಬಾಯಿಂದ ಇಷ್ಟು ಮಾತಾಡಿಸಿತು. ಅಥವಾ ತೌರಿನ ತಂಪಿನಲ್ಲಿ ನಾಲಿಗೆ ಸ್ವತಂತ್ರ ವಹಿಸಿತಾ? ಮಾತಾಡಲಿಲ್ಲ ಶಿವರಾಮ. ಅಮ್ಮನ ಪಕ್ಕದಲ್ಲಿ ಮಲಗಿದ್ದ ಎಳೆಮಗುವನ್ನು ನೋಡಿ ಅವನ ಕಣ್ಣುಗಳು ಅರಳಿದ್ದುವು.

'ಎತ್ಕೊಳ್ಲಾ?' ಕೇಳಿದ ಶಿವರಾಮ.

'ತಲೆ ಬಳುಕುತ್ತೆ, ನಿಧಾನ...' ಸೀತಾಲಕ್ಷ್ಮಿ ಮಗುವನ್ನೆತ್ತಿ ಗಂಡನ ತೊಡೆಯ ಮೇಲಿಟ್ಟದ್ದಳು. ಅವನು ಬೆರಳುಗಳಿಂದ ಮಗನ ಗಲ್ಲ ಅಲುಗಾಡಿಸಿದ್ದ, ನೋವಾಗದಂತೆ.

ಯಾರು ಬರದಿದ್ದರೂ ನಿಂತು ಹೋಗಲಿಲ್ಲ ನಾಮಕರಣ. ಮನೆಮಗಳು ಚೊಚ್ಚಲು ಹೆರಿಗೆಯಲ್ಲಿ ಗಂಡು ಮಗುವನ್ನು ಹೆತ್ತಿದ್ದಾಳೆ. ಅಂದಮೇಲೆ ಸಂಭ್ರಮಕ್ಕೆ ಕೊರತೆಯಾಗಲಿಲ್ಲ. ನಾಮಕರಣ, ತೊಟ್ಟಿಲುಶಾಸ್ತ್ರ ಎಲ್ಲಾ ಮುಗಿಸಿಕೊಂಡು ಮರುದಿನ ವಾಪಸು ಹೋಗಿದ್ದ ಶಿವರಾಮ. ಆಮೇಲೆ ಅವನ ಪತ್ತೆ ಇಲ್ಲ. ನಾಲ್ಕು, ನಾಲ್ಕೂವರೆ ತಿಂಗಳು ಕಡಿಮೆ ಅವಧಿಯಲ್ಲ. ಯಾವುದೋ ಹೆಳೆ ಮಾಡಿಕೊಂಡು ಹೆಂಡತಿ, ಮಗುವನ್ನು ನೋಡಲು ಎಂಥವರಾದರೂ ಧಾವಿಸಿ ಬರುತ್ತಾರೆ. ಸೀತಾಲಕ್ಷ್ಮಿಯ ಅಮ್ಮ ಬಾಯಿ ಬಿಟ್ಟು ಕೇಳಿದ್ದಳು,

'ಏನೇ, ನಿನ್ನ ಗಂಡನ ಸವಾರಿ ಮತ್ತೆ ಬರ್ಲೇ ಇಲ್ಲ. ಮಾವನ ಮನೆಗೆ ಬರೋಕೆ ಅಷ್ಟು ದಾಕ್ಷಿಣ್ಯಾನಾ?'

'ಬರ್ದಿದ್ರೆ ಬಿಡ್ಲಿ. ಅವರೊಂಥರಾ ಮನಸ್ಸು ಬಂದ ಗಿರಾಕಿ...' ಪ್ರತ್ಯುತ್ತರಿಸಿದ್ದಳು ಸೀತಾಲಕ್ಷ್ಮಿ. ಬಾಯಲ್ಲಿ ನಿರ್ಲಕ್ಷ್ಯದ ಮಾತಾಡಿದರೂ ಒಳಗಿಂದೊಳಗೆ ಅವಗಣನೆಗೆ ಒಳಗಾದ ಭಾವನೆ. ಬರಬಹುದಿತ್ತು ಗಂಡ. ಕೊನೇಪಕ್ಷ ಒಂದು ದಿನದ ಮಟ್ಟಿಗಾದರೂ... ಎನ್ನುವ ಚಿಂತನೆ.

ಸೀತಾಲಕ್ಷ್ಮಿಯ ಬಾಣಂತನದ ಅವಧಿಯಲ್ಲಿ ಕೊನೆಗೂ ಅತ್ತ ಕಡೆ ಹಣಿಕಿ ನೋಡಲಿಲ್ಲ ಶಿವರಾಮ. 'ಹೊರಡ್ತೀನಿ ಕಣೇ.., ಹೊರಡ್ತೀನಿ ಕಣೇ...' ಎಂದು ಗಂಡನ ಗಿರ ಹಿಡಿದವಳಂತೆ ಸೀತಾಲಕ್ಷ್ಮಿ ಉರು ಹಾಕತೊಡಗಿದ ಮೇಲೆ ಶಿವರಾಮನ ವಿಳಾಸಕ್ಕೆ ಪತ್ರ ಹೋಗಿತ್ತು, 'ಇಂತಾ ದಿನ ಬಾಣಂತಿ, ಮಗುವನ್ನು ಕರೆದುಕೊಂಡು ಬರುತ್ತೇವೆ' ಎನ್ನುವ ಮಜಕೂರಿನೊಂದಿಗೆ. ತಿಂಗಳೊಪ್ಪತ್ತು ಮೊದಲೇ ಬರೆದ ಕಾಗದ. ಪೋಸ್ಟಾಫೀಸಿನಿಂದ ಅದನ್ನು ಆ ಹಳ್ಳಿಮೂಲೆಗೆ ತೆಗೆದುಕೊಂಡು ಹೋಗಿ ಕೊಡುವುದಕ್ಕೆ ಪೋಸ್ಟ್‌ಮ್ಯಾನ್ ನಡೆಯಬೇಕು ಎರಡು ಮೈಲಿ. ಯಾರಾದರೂ ಆ ಕಡೆಯವರ ತಲೆ ಕಂಡರೆ ತಲುಪಿಸಲು ಹೇಳುತ್ತಾನೆ, ಅಥವಾ ಅವರೇ, 'ನಮ್ಮೂರಿಂದು ಕಾಗದ ಗೀಗದ ಉಂಟಾ? ಇದ್ರೆ ಕೊಡಿ...' ಎಂದು ಕೇಳಿ ತೆಗೆದುಕೊಂಡು ಹೋಗಿ ನೆನಪಾದಾಗ ತಲುಪಿಸುವ ರಿವಾಜೂ ಉಂಟು. ಕಾಗದ ಹೋಗಿದೆ... ಎನ್ನುವ ನಂಬಿಕೆಯ ಮೇಲೆ ಇವರು ಹೊರಡುವ ತಯಾರಿ ಮಾಡಿಕೊಂಡಿದ್ದರು. ತೌರಿನಿಂದಲೇ ಆಗಲಿ, ಗಂಡನ ಮನೆಯಿಂದಲೇ ಆಗಲಿ, ಬಸ್ಸು ಬರುವ ಹಾದಿಯವರೆಗೆ ನಡೆದುಕೊಂಡು ಹೋಗಲೇ ಬೇಕು. ದಿನಕ್ಕೆ ಒಂದೋ, ಎರಡೋ ಬಾರಿ ಮಾತ್ರ ಬಸ್ಸಿನ ಓಡಾಟ. ಎರಡು, ಮೂರು ಮೈಲಿ ನಡೆಯುವುದೆಂದರೆ ಎಲ್ಲರಿಗೂ ಸಸಾರ. ಬಸ್ಸಿನ ಹಣ ಕಾಯುವ ರಗಳೆ ಬೇಡವೆಂದು ಹತ್ತೆಂಟು ಮೈಲಿ ದೂರದ ಊರಿಗೆ ನಡೆದುಕೊಂಡು ಹೋಗುವವರೂ ಇದ್ದರು. ರಾಸಾಯನಿಕ ಬಳಸಿ ಬೆಳೆದಿದ್ದನ್ನು ತಿಂದ ಜನ ಅಲ್ಲ. ಕೊಟ್ಟಿಗೆ ಗೊಬ್ಬರ, ಬೂದಿಗಳೇ ತರಕಾರಿ ಗಿಡಗಳ ಸಾರ. ಭತ್ತ ಬೆಳೆಯುವ ಗದ್ದೆಗೂ ಮನೆಯಲ್ಲಿ ಸಾಕಿಕೊಂಡಿರುತ್ತಿದ್ದ ಜಾನುವಾರುಗಳ ಗೊಬ್ಬರ. ಗೊಬ್ಬರಕ್ಕೆಂದೇ ಜಾನುವಾರುಗಳನ್ನು ಸಾಕಿಕೊಂಡಿರುತ್ತಿದ್ದರು. ಕೊಟ್ಟಿಗೆ ಪಕ್ಕದಲ್ಲಿಯೇ ದೊಡ್ಡ ಗೊಬ್ಬರದ ಗುಂಡಿ. ಕೊಟ್ಟಿಗೆ ತುಂಬಾ ಕಾನಿನಿಂದ ಕಡಿದು ತಂದ ಸೊಪ್ಪಿನ ಮೆತ್ತನೆಯ ಹರೆ ಹರಡಿ, ಒಂದು ಪದರದ ಮೇಲೆ ಮರುದಿನವೋ, ಆ ಮರುದಿನವೋ ಮತ್ತೊಂದು ಪದರ. ಅದರ ಮೇಲೆ ಇನ್ನೊಂದು. ಜಾನುವಾರುಗಳ ಗಂಜಲ, ಸಗಣಿಯಿಂದ ಎಲೆಗಳು ಕೊಳೆಯುತ್ತಾ ಒಂದು ದಿನ ಅವನ್ನೆಲ್ಲಾ ಗೊಬ್ಬರದ ಗುಂಡಿಗೆ ಎಳೆದು ಹಾಕಿ, ಮತ್ತೆ ಹೊಸ ಸೊಪ್ಪುಗಳನ್ನು ಹರಡಿ, ಕೊಟ್ಟಿಗೆ ಚೊಕ್ಕ ಮಾಡಿದ ದಿನ ಅಲ್ಲಿಂದ ಏಳುತ್ತಿದ್ದ ನಾತ ಸುತ್ತ ಅಷ್ಟು ರಾಷ್ಟ್ರದಲ್ಲಿ ಹರಡಿಕೊಳ್ಳುತ್ತಿತ್ತು. ವರ್ಷಾವಧಿಯ ದೀವಳಿಗೆ ಹಬ್ಬದ ದಿನ ಜಾನುವಾರುಗಳ ಮೈಯನ್ನಷ್ಟೇ ಅಲ್ಲ, ಕೊಟ್ಟಿಗೆಯನ್ನೂ ತೊಳೆದು ಲಕಲಕ ಮಾಡುತ್ತಿದ್ದ ಪದ್ಧತಿ. ಗೊಬ್ಬರದ ಗುಂಡಿಯಲ್ಲಿ ತುಂಬಿಕೊಂಡು ಮತ್ತಷ್ಟು ಕೊಳೆತು ಹದವಾಗಿರುತ್ತಿದ್ದ ಗೊಬ್ಬರ ಮಳೆ ಹಿಡಿಯುವುದಕ್ಕೆ ಮುಂಚೆ ಗದ್ದೆಗೆ ರವಾನೆಯಾಗಿ, ಗದ್ದೆ ತುಂಬಾ ಹರಡಿಸಿಕೊಂಡು, ಮಳೆಗಾಲದ ಬಿತ್ತನೆಗೆ ಅಣಿಯಾಗುತ್ತಿತ್ತು. ಸೀತಾಲಕ್ಷ್ಮಿಯ ತೌರುಮನೆಗೂ, ಗಂಡನ ಮನೆಗೂ, ಅಥವಾ ಪ್ರತಿ ಹಳ್ಳಿಹಳ್ಳಿಗೂ ಕೃಷಿ ಕೆಲಸಗಳಲ್ಲಿ ಬದಲಾವಣೆಯೇನಿಲ್ಲ. ಅಲ್ಲಿದ್ದಂತೆ ಇಲ್ಲಿ. ಇಲ್ಲಿದ್ದಂತೆ ಇನ್ನೊಂದು ಕಡೆ.

ಸೀತಾಲಕ್ಷ್ಮಿ ಬಾಣಂತನ ಮುಗಿಸಿಕೊಂಡು ಗಂಡನ ಮನೆಗೆ ಬಂದಳಲ್ಲ, ಅಲ್ಲಿ ಹಾಕಿದ್ದ ಕಾಗದ